# ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ. 175/2023

**ಸಾಕ್ಷಿಯನ್ನು ದಿನಾಂಕಃ 19.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಪಿರ್ಯಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದನ್ನು ನನ್ನ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ನನ್ನ ಸಹಿಗಳನ್ನು ಹಾಕಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ನಿಶಾನೆಗಳಾಗಿ ಹಾಜರುಪಡಿಸಿರುತ್ತೇನೆ.

ಆರೋಪಿ ನನಗೆ ನೀಡಿದ ಒಂದು ಚೆಕ್ ಅನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಮತ್ತು ಆರೋಪಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-2** ಎಂದು, ಆರೋಪಿಗೆ ವಕೀಲರ ಮುಖಾಂತರ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-3** ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-4** ಎಂದು, ಅಂಚೆ ಸ್ವೀಕೃತಿಯನ್ನು ಹಾಜರಿ ಪಡಿಸಿದ್ದು ಅದನ್ನು **ನಿ.ಪಿ.-5** ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ..

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಪಾಟೀ ಸವಾಲಿಗಾಗಿ ಸಮಾಯವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**